2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ133/2018

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಪೂರ್ಣೇಶ್ | ಪಿಡಬ್ಲೂ-2 |
| ತಂದೆಯ ಹೆಸರು | - | ಚೆನ್ನಯ್ಯ | ಸಿಡಬ್ಲೂ - 3 |
| ವಯಸ್ಸು | - | 35 ವರ್ಷ | |
| ಉದ್ಯೋಗ | - | ಕೂಲಿ ಕೆಲಸ | |
| ವಾಸ ಸ್ಥಳ | - | ಕೆರೆಮಕ್ಕಿ | |

ದಿನಾಂಕಃ 08.08.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಆತ ನನ್ನ ಸೋದರ ಸಂಬಂಧಿ. ಮೃತ ಹೇಮಲತಾ ಆರೋಪಿಯ ಹೆಂಡತಿ. ಚಾಸಾ.2, ಚಾಸಾ.4 ರಿಂದ ಚಾಸಾ.8, 10, 15 ,16,18 ರವರು ನನ್ನ ಸಂಬಂಧಿ. ಚಾಸಾ.11, 17, 19, 20 ರವರು ಗೊತ್ತು. ಅವರು ನಮ್ಮ ಊರಿನವರು.

2. ಈಗ್ಗೆ 5 ವರ್ಷಗಳ ಹಿಂದೆ ಹೇಮಲತಾ ಹೊಟ್ಟೆನೋವು ಹೇಳಿದ್ದರಿಂದ ನಾನು ಮತ್ತು ನಮ್ಮ ಕಡೆಯವರು ಆಕೆಯನ್ನು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಅಲ್ಲಿ ಹೇಮಲತಾ ಹೊಟ್ಟೆ ನೋವನ್ನು ತಡೆಯಲಾರದೆ ಇಲಿ ಪಾಷಾಣವನ್ನು ಸೇವಿಸಿರುವುದಾಗಿ ತಿಳಿಸಿದಳು. ಅಲ್ಲಿ ಆಕೆಯನ್ನು ದಾಖಲು ಮಾಡಿ ನಾನು ವಾಪಾಸ್ಸು ಬಂದೆನು. ನಂತರ ಅಲ್ಲಿ ಆಗುವುದಿಲ್ಲವೆಂದು ಆಕೆಯನ್ನು ಹಾಸನದ ಮಂಗಳೂರು ಆಸ್ಪತ್ರೆಗೆ ಕರೆದುಕೊಂಡು

ಹೋಗಿರುವುದಾಗಿ ತಿಳಿಯಿತು. ಸದರಿ ಆಸ್ಪತ್ರೆಯಲ್ಲಿ ಆಕೆ ಮೃತಪಟ್ಟ ನಂತರ ನನಗೆ ವಿಷಯ ತಿಳಿದ ಬಳಿಕ ನಾನು ಸದರಿ ಆಸ್ಪತ್ರೆಗೆ ಹೋಗಿದ್ದೆನು. ಆಗ ಪೊಲೀಸರು ಪೋಸ್ಟ್ ಮಾರ್ಟಮ್ ಗೆಂದು ಹೇಳಿ ನನ್ನ ಸಹಿಯನ್ನು ಪಡೆದುಕೊಂಡರು.

3. ಸಾಕ್ಷಿಯು ಈಗಾಗಲೇ ನಿಪಿ.1 ಎಂದು ಗುರುತಿಸಲ್ಪಟ್ಟಿರುವ ನೋಟೀಸು ಮತ್ತು ನಿಪಿ.2 ಎಂದು ಗುರುತಿಸಲ್ಪಟ್ಟಿರುವ ಶವ ತನಿಖಾ ಪಂಚನಾಮೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ.1(ಬಿ) ಮತ್ತು ನಿಪಿ.2(ಸಿ) ಮತ್ತು (ಡಿ) ಎಂದು ಗುರುತಿಸಲಾಯಿತು.

4. ಸಾಕ್ಷಿಯು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿರುವ ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಹಾಸನದ ಮಂಗಳಾ ಆಸ್ಪತ್ರೆಯಲ್ಲಿ ನಾನು ಮೃತ ಹೇಮಲತಾಳ ಶವವನ್ನು ನೋಡಲು ಹೋದ ಸಮಯದಲ್ಲಿ ಪೊಲೀಸರು ತೆಗೆದುಕೊಂಡಿದ್ದಾಗಿ ಅದರಲ್ಲಿ ನನ್ನ ಜೊತೆ ಪ್ರಾಸಾ.1 ರವರು ಇರುವುದಾಗಿ ನುಡಿದಿರುತ್ತಾರೆ. ಆರೋಪಿಯಿಂದ ಹೇಮಲತಾಳಿಗೆ ಯಾವುದೇ ತೊಂದರೆಯಾಗಿರಲಿಲ್ಲ. ಅವರಿಬ್ಬರೂ ಗಂಡ ಹೆಂಡತಿ ಅನ್ಯೂನ್ಯವಾಗಿದ್ದರು. ಹೇಮಲತಾ ಸಾಯುವ ಪೂರ್ವದಲ್ಲಿ ಆರೋಪಿಯ ವಿರುದ್ಧ ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಯಾವುದೇ ನೋಟೀಸನ್ನು ನೀಡಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮಹಜರ್ ನ್ನು ಜರುಗಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

5. ದಿನಾಂಕ 04.06.2018 ರಂದು ಹಾಸನದ ಹಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಹೇಮಲತಾಳ ಶವ ತನಿಖಾ ಸಮಯದಲ್ಲಿ ಹಾಜರಿದ್ದು ಸಹಕರಿಸುವಂತೆ ಪೊಲೀಸರು ನನಗೆ ನಿಪಿ.1 ರಂತೆ ನೋಟೀಸನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಖುದ್ದಾಗಿ ಆಕೆಯ ಶವವನ್ನು ನೋಡಲು ಅಲ್ಲಿಗೆ ಹೋಗಿದ್ದೆನು ಎನ್ನುತ್ತಾರೆ. ಸದರಿ ಶವಾಗಾರದಲ್ಲಿ ಸಂಜೆ 4.00 ಗಂಟೆಯಿಂದ 6.00 ಗಂಟೆಯವರೆಗೆ ನನ್ನ ಮತ್ತು ಸಹ ಪಂಚರಾದ ಪ್ರಾಸಾ.1 ಮತ್ತು 5 ರವರ ಸಮಕ್ಷಮ ನಿಪಿ.2 ರಂತೆ ಪೊಲೀಸರು ಶವತನಿಖಾ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ. ಶವತನಿಖಾ ಸಮಯದಲ್ಲಿ ಆರೋಪಿಯು ತನ್ನ ಹೆಂಡತಿಯಾದ ಹೇಮಲತಾಳಿಗೆ ವಿನಾಃ ಕಾರಣ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡುತ್ತಿದ್ದ ಬಗ್ಗೆ ಹಾಗೂ ಆಕೆ ಯಾವುದಾದರೂ ವಿಷವನ್ನು ಕುಡಿದು ಸತ್ತರೆ ಆತ ನೆಮ್ಮದಿಯಾಗಿರುವುದಾಗಿ ಆಕೆಯನ್ನು ಕುರಿತು ಬೈಯ್ಯುತ್ತಿದ್ದಾಗಿ ಆ ರೀತಿ ಆರೋಪಿ ನೀಡುತ್ತಿದ್ದ ಹಿಂಸೆಯನ್ನು ತಾಳಲಾರದೇ ದಿನಾಂಕ 07.05.2018 ರಂದು ಆರೋಪಿ ತನ್ನ ಅಜ್ಜಿಯ ತಿಥಿಗೆ ಹೋದ ಸಮಯದಲ್ಲಿ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಹೇಮಾಲತಾಳು ಮನೆಯಲ್ಲಿದ್ದ ಇಲಿ ಪಾಷಾಣವನ್ನು ಸೇವಿಸಿ ರಾತ್ರಿಯವರೆಗೂ ಆ ವಿಚಾರವನ್ನು ಯಾರಿಗೂ ತಿಳಿಸದೇ ರಾತ್ರಿ ಆರೋಪಿ ತಿಥಿ ಕಾರ್ಯಕ್ರಮ ಮುಗಿಸಿ ಮನೆಗೆ ವಾಪಾಸ್ಸು ಹೋದಾಗ ಹೇಮಲತಾ ನರಳುತ್ತಿದ್ದುದನ್ನು ನೋಡಿ ಆತ ಆಕೆಯನ್ನು ಜೀಪಿನಲ್ಲಿ ಮೊದಲಿಗೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ನಂತರ ಅಲ್ಲಿ ವೈಧ್ಯರು

ಆಗುವುದಿಲ್ಲವೆಂದು ಹೇಳಿದ ಮೇರೆಗೆ ಆಕೆಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಮಂಗಳ ಆಸ್ಪತ್ರೆಗೆ ದಾಖಲು ಮಾಡಿದ್ದಾಗಿ ನಂತರ ಚಿಕಿತ್ಸೆ ಫಲಕಾರಿಯಾಗದೇ ಆಕೆ ದಿನಾಂಕ 03.06.2018 ರಂದು ರಾತ್ರಿ 11.45 ಗಂಟೆಗೆ ಮೃತಪಟ್ಟಿದ್ದಾಗಿ ಮತ್ತು ಆರೋಪಿ ನೀಡುತ್ತಿದ್ದ ಹಿಂಸೆಯನ್ನು ತಾಳಲಾರದೆ ಆಕೆ ಮತ್ತು ಆತ ಆಕೆಗೆ ಪ್ರಚೋದಿಸುತ್ತಿದ್ದುದರಿಂದ ಹೇಮಲತಾಳು ಇಲಿ ಪಾಷಾಣ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿಯಿತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಮಲತಾ ತನ್ನ ತವರು ಮನೆಗೆ ಆಸ್ತಿಯನ್ನು ಕೇಳಲು ಹೋದ ಸಮಯದಲ್ಲಿ ಆಕೆಯ ತವರು ಮನೆಯವರು ಆಕೆಯನ್ನು ಬೈದು ಕಳುಹಿಸಿದ್ದಾಗಿ ನಂತರ ಆಕೆ ತನ್ನ ಗಂಡನ ಮನೆಯಲ್ಲಿಯೇ ವಾಸವಾಗಿದ್ದಾಗಿ ನುಡಿದಿರುತ್ತಾರೆ.

6. ಘಟನೆಯ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿತನು ನಿಮ್ಮ ಸಂಬಂಧಿಕನಾಗಿರುವ ಕಾರಣ ಆರೋಪಿಗೆ ಸಹಾಯ ಮಾಡಲು ಆರೋಪಿಯೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.